ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 09-12-1970.

*ಪುರುಷಾರ್ಥದ ಮುಖ್ಯ ಆಧಾರ ಗ್ರಹಿಸುವ ಶಕ್ತಿ* (पुरुषार्थ का मुख्य आधार कैचिंग पावर)

ಇಂದು ಪ್ರತಿಯೊಬ್ಬರೂ ಎಷ್ಟು ಜ್ಞಾನಪೂರ್ಣ ಮತ್ತು ಎಷ್ಟು ಶಕ್ತಿಶಾಲಿಯಾಗಿದ್ದೀರಿ ಎಂಬ ಎರಡು ಮಾತುಗಳನ್ನು ನೋಡುತ್ತಿದ್ದೇವೆ. ಶಕ್ತಿಪೂರ್ಣರಾಗಿರುವಿರೆಂದು ಅದರಲ್ಲಿಯೂ ಮುಖ್ಯವಾದ ಗ್ರಹಿಸುವ ಶಕ್ತಿ ಪ್ರತಿಯೊಬ್ಬರಲ್ಲಿ ಎಷ್ಟು ಶಕ್ತಿಶಾಲಿಯಾಗಿದೆ ಎಂಬುದನ್ನು ಬಾಪ್ ದಾದಾ ನೋಡುತ್ತಿದ್ದರು. ಪುರುಷಾರ್ಥದ ಮುಖ್ಯ ಆಧಾರ ಗ್ರಹಣಶಕ್ತಿಯಾಗಿದೆ. ಇತ್ತೀಚೆಗೆ ವಿಜ್ಞಾನಿಗಳು ಶಬ್ದವನ್ನು ಗ್ರಹಿಸುವ ಪ್ರಯತ್ನವನ್ನು ಮಾಡುತ್ತಾರೆ ಆದರೆ ಶಾಂತಿಯ ಶಕ್ತಿಯಿಂದ ತಾವು ಏನನ್ನು ಗ್ರಹಿಸುವಿರಿ? ಅವರು ಹೇಗೆ ಅತಿ ಪುರಾತನ ಧ್ವನಿಯನ್ನು ಗ್ರಹಿಸುತ್ತಾರೆಯೋ ಹಾಗೆಯೇ ತಾವು ಏನನ್ನು ಗ್ರಹಿಸುತ್ತೀರಿ? ತಮ್ಮ 5000 ವರ್ಷಗಳ ಹಿಂದಿನ ದೈವೀ ಸಂಸ್ಕಾರಗಳನ್ನು ಗ್ರಹಿಸಬಲ್ಲಿರಾ? ಇಷ್ಟು ಗ್ರಹಣ ಶಕ್ತಿ ಬಂದಿದೆಯೇ? ಅವರು ಬೇರೆಯವರ ಧ್ವನಿಯನ್ನು ಗ್ರಹಿಸುತ್ತಾರೆ. ತಾವು ತಮ್ಮ ಮೂಲ ಸಂಸ್ಕಾರಗಳನ್ನು ಕೇವಲ ಗ್ರಹಿಸುವುದಲ್ಲ ಆದರೆ ತಮ್ಮ ಪ್ರಾಕ್ಟಿಕಲ್ ಸ್ವರೂಪ ಮಾಡಿಕೊಳ್ಳುತ್ತೀರಿ. ನಾನು ಇದೇ ಆಗಿದ್ದೆ ಮತ್ತೆ ಆಗುತ್ತಿದ್ದೇನೆ ಎಂಬುದು ಸದಾ ಸ್ಮೃತಿಯಲ್ಲಿರಲಿ. ಎಷ್ಟೆಷ್ಟು ಆ ಸಂಸ್ಕಾರಗಳನ್ನು ಗ್ರಹಿಸಬಲ್ಲಿರೋ ಅಷ್ಟು ಸ್ವರೂಪ ಆಗುವಿರಿ. ತಮ್ಮ ಸ್ಮೃತಿಯನ್ನು ಶಕ್ತಿಶಾಲಿ ಮಾಡಿರಿ ಎಂದರೆ ಶ್ರೇಷ್ಠ ಮತ್ತು ಸ್ಪಷ್ಟ ಮಾಡಿಕೊಳ್ಳಿ, ಹೇಗೆ ತಮ್ಮ ವರ್ತಮಾನ ಸ್ವರೂಪದ, ವರ್ತಮಾನ ಸಂಸ್ಕಾರಗಳ ಸ್ಪಷ್ಟ ಅನುಭವವಾಗುತ್ತದೆಯೋ ಹಾಗೆಯೇ ತಮ್ಮ ಆದಿ ಸ್ವರೂಪ ಮತ್ತು ಸಂಸ್ಕಾರಗಳ ಸ್ಪಷ್ಟತೆಯೂ ಅಷ್ಟೇ ಅನುಭವವಾಗುವುದು. ತಿಳಿಯಿತೇ? ಅಷ್ಟು ಗ್ರಹಣ ಶಕ್ತಿ ಬೇಕು. ವರ್ತಮಾನ ಸಮಯದಲ್ಲಿ ಹೇಗೆ ತಮ್ಮ ಚಲನೆ ಮತ್ತು ಕರ್ತವ್ಯ ಸ್ಪಷ್ಟ ಮತ್ತು ಸಹಜ ಸ್ಮೃತಿಯಲ್ಲಿರುತ್ತದೆಯೋ ಅಷ್ಟೇ ತಮ್ಮ ಮೂಲ ಚಲನೆ ಸಹಜ ಮತ್ತು ಸ್ಪಷ್ಟ ಸ್ಮೃತಿಯಲ್ಲಿರಬೇಕು. ಸದಾ ಇದು ನಾನೇ ಆಗಿದ್ದೆ ಎಂಬ ದೃಡ ಸಂಕಲ್ಪವಿರಲಿ. 5000 ವರ್ಷದ ಮಾತು ನಿನ್ನೆಯ ಮಾತಿನಷ್ಟು ಸ್ಪಷ್ಟ ಅನುಭವವಾಗಬೇಕು. ಇದನ್ನು ಗ್ರಹಣ ಶಕ್ತಿ ಎನ್ನುತ್ತಾರೆ. ತಮ್ಮ ಸ್ಮೃತಿಯನ್ನು ಇಷ್ಟು ಶ್ರೇಷ್ಠ ಮತ್ತು ಸ್ಪಷ್ಟ ಮಾಡಿಕೊಂಡು ಹೋಗಿ. ಭಟ್ಟಿಯಲ್ಲಿ ಬಂದಿರುವಿರಲ್ಲವೇ? ಸದಾ ತಮ್ಮ ಆದಿ ಸ್ವರೂಪ ಮತ್ತು ಆದಿ ಸಂಸ್ಕಾರ ಸಮ್ಮುಖದಲ್ಲಿ ಕಾಣಲಿ. ತಮ್ಮ ಸ್ಮೃತಿಯನ್ನು ಶಕ್ತಿಶಾಲಿ ಮಾಡುವುದರಿಂದ ವೃತ್ತಿ ಮತ್ತು ದೃಷ್ಟಿ ಸ್ವತಃ ಶಕ್ತಿಶಾಲಿಯಾಗುವುದು. ಮತ್ತೆ ಈ ಕುಮಾರರ ಗುಂಪು ಏನಾಗುವುದು? ಅನುಕುಮಾರ ಎಂದರೆ ಅದ್ಭುತ ಪ್ರತಿಯೊಬ್ಬರ ಎರಡು ಕಣ್ಣುಗಳಿಂದ ಎರಡು ಸ್ವರೂಪದ ಸಾಕ್ಷಾತ್ಕಾರವಾಗುವುದು. ಯಾವ ಎರಡು ಸ್ವರೂಪ? ನಿರಾಕಾರಿ ಮತ್ತು ದಿವ್ಯಗುಣಧಾರಿ ಎಂದು ಮೊದಲೇ ಹೇಳಿದ್ದೆವು. ಫರಿಶ್ತೆಯ ರೂಪ ಮತ್ತು ದೈವಿ ರೂಪ. ಓಡಾಡುತ್ತಿರುವಂತಹ ಲೈಟ್ ಹೌಸ್ (ಪ್ರಕಾಶದ ಮನೆ) ಮತ್ತು ಮೈಟ್ ಹೌಸ್ (ಶಕ್ತಿಯ ಮನೆ) ಎಂಬಂತೆ ಪ್ರತಿಯೊಬ್ಬರೂ ಅನುಭವ ಮಾಡಿ ಅಥವಾ ಪ್ರತಿಯೊಬ್ಬರಿಂದ ಈ ರೀತಿ ಅನುಭವವಾಗುವುದು. ಹೀಗೆ ತಮ್ಮ ಸ್ವರೂಪದ ಸಾಕ್ಷಾತ್ಕಾರವಾಗುತ್ತದೆಯೇ? 5000 ವರ್ಷದ್ದನ್ನು ಗ್ರಹಣ ಮಾಡುತ್ತೀರಿ ಅಥವಾ ಅನುಭವ ಮಾಡುತ್ತೀರಿ ಎಂದಾಗ ಈ ಅಂತಿಮ ಸ್ವರೂಪದ ಅನುಭವವಾಗುವುದಿಲ್ಲವೇ? ಈಗ ಏನೆಲ್ಲಾ ಕೊರತೆಯಿರುವುದೋ ಅದನ್ನು ತುಂಬಿಕೊಂಡು ಇಂತಹ ಅನುಭವಿಮೂರ್ತಿಯಾಗಿ ಹೋಗುವಿರಿ. ಆದ್ದರಿಂದ ಎಂದಿಗೂ ಯಾವ ಕೊರತೆಯೂ ಇರಬಾರದೆಂದು ನೋಡಿಕೊಳ್ಳಿ.

ಒಮ್ಮೊಮ್ಮೆ ಹೇಗೆ ಸತ್ಯಯುಗಿ ಆತ್ಮರ ಪ್ರವೇಶವಾದಾಗ ಅವರಿಗೆ ಈ ಪುರುಷಾರ್ಥಿ ಜೀವನದ ಸ್ವಲ್ಪವೂ ಜ್ಞಾನವೇ ಇರುವುದಿಲ್ಲ. ಭಟ್ಟಿಯಲ್ಲಿ ಇಂತಹ ಪರಿವರ್ತನೆ ಮಾಡಿಕೊಂಡು ಹೋಗಿ. ಈ ರೀತಿ ತಮಗೆ ದುರ್ಬಲತೆಗಳ ಮತ್ತು ಕೊರತೆಗಳ ಜ್ಞಾನವೇ ಗುಪ್ತವಾಗಬೇಕು. ಇದಕ್ಕಾಗಿ ವಿಶೇಷ ಈ ಗುಂಪು ಎರಡು ಮಾತುಗಳನ್ನು ನೆನಪಿಡಬೇಕು. ಎರಡು ಮಾತುಗಳು ಎರಡು ಶಬ್ದದಲ್ಲಿಯೇ ಇವೆ. ಒಂದು ಅತಿಥಿ ಗೃಹ (ಗೆಸ್ಟ್ ಹೌಸ್) ಎರಡನೆಯದು (ಗೆಟ್ ಔಟ್) ಎಂದರೆ ಹೊರಗೆ ಹೋಗುವುದು ಮತ್ತು ಮುಂದೆ ಒಳಗೆ ಬರಲು ಬಿಡದಿರುವುದು. ಈ ಹಳೆಯ ಜಗತ್ತನ್ನು ಸದಾ ಅತಿಥಿ ಗೃಹ ಎಂದು ತಿಳಿಯಿರಿ. ಆಗ ಎಂದೂ ದುರ್ಬಲತೆ ಅಥವಾ ಕೊರತೆಯ ಅನುಭವ ಮಾಡುವುದಿಲ್ಲ. ಸಹಜ ಪುರುಷಾರ್ಥವಾಗಿದೆಯಲ್ಲವೇ? ಆದ್ದರಿಂದ ಈ ಗುಂಪಿಗೆ ಈಗ ಅದ್ಭುತವನ್ನು ಮಾಡಿ

ತೋರಿಸಬೇಕು ನಂತರ 21 ಜನ್ಮಗಳಿಗೆ ವಿಶ್ರಾಂತಿ ಪಡೆಯುವುದು ಎಂಬ ಗುರಿ ಸದಾ ಇಟ್ಟುಕೊಳ್ಳಿ. ಆಗ ಮನ, ವಚನ, ಕರ್ಮದ ಸೇವೆಯಲ್ಲಿ ಒಂದು ಕ್ಷಣವೂ ವಿಶ್ರಾಂತಿಯಿರುವುದಿಲ್ಲ. ಆಗಲೇ ಅತ್ಯುತ್ತವವಾಗುವಿರಿ. ತಿಳಿಯಿತೇ? ಏಕೆಂದರೆ ಇದಾಗಿದೆ ಪರಿಶ್ರಮಿ ಗುಂಪು. ಇದರಲ್ಲಿ ವಿಶ್ರಾಂತಿಯಿಲ್ಲ. ಎಂದೂ ವಿಶ್ರಾಂತಿ ಮಾಡುವುದಿಲ್ಲ ಮತ್ತು ವ್ಯರ್ಥವೂ ಮಾಡುವುದಿಲ್ಲ. ಆದ್ದರಿಂದ ಪರಿಶ್ರಮಿ ಗುಂಪಿಗೆ ಅಥವಾ ಆತ್ಮಿಕ ಸೇವಾಧಾರಿ ಸಂಘಟನೆಗೆ ಸೇವೆಯ ಹೊರತು ಮತ್ತೇನೂ ಇರಬಾರದು. ಆಗಲೇ ಹೆಸರಿಗೆ ತಕ್ಕಂತೆ ಕೆಲಸ ಮಾಡಿದಂತೆ. ಮತ್ತೊಂದು ವಿಷಯವನ್ನು ಕೂಡ ನೆನಪಿಡಬೇಕು. ಸೇವೆಗಾಗಿ ತಮ್ಮನ್ನೇ ಅರ್ಪಿಸಿಕೊಳ್ಳಬೇಕು ಆಗಲೇ ಬಾಪ್ ದಾದಾರಿಂದ  ಬಹುಮಾನ ಸಿಗುವುದು ಎಂಬುದನ್ನೂ ನೆನಪಿಡಿ. ನೆನಪಿಟ್ಟುಕೊಳ್ಳಬೇಕು ಸಮಾವೇಶಗೊಳಿಸುವುದು ಮತ್ತು ಪರಿಶ್ರಮಿ ಅಥವಾ ಆತ್ಮಿಕ ಸೇವಾಧಾರಿ ಗುಂಪಿಗೆ ಇನ್ನೊಂದು ವಿಷಯವನ್ನು ಸ್ಮೃತಿಯಲ್ಲಿ ಇಡಬೇಕಾಗಿದೆ ಎದುರಿಸುವುದು ನಮ್ಮ ಲಕ್ಷಣವಾಗಿದೆ. ಮಾಯೆಯನ್ನು ಎದುರಿಸಬೇಕೇ ಹೊರತು ದೈವಿ ಪರಿವಾರವನ್ನಲ್ಲ. ಏನನ್ನು ಸಮಾವೇಶಗೊಳಿಸಿಕೊಳ್ಳಬೇಕು? ತಮ್ಮ ಹಳೆಯ ಸಂಸ್ಕಾರಗಳನ್ನು. "ಸಮಾವೇಶಗೊಳಿಸಬೇಕು ಮತ್ತು ಎದುರಿಸಬೇಕು ಇದೇ ನಮ್ಮ ಗುರಿ" ಇದು ಈ ಗುಂಪಿನ ಸ್ಲೋಗನ್ ಆಗಿದೆ. ಜ್ಞಾನಪೂರ್ಣರಾಗುವುದರ ಜೊತೆಗೆ ಶಕ್ತಿಪೂರ್ಣರಾಗಬೇಕು. ಆಗಲೇ ಸೇವಾಧಾರಿಯಾಗುವಿರಿ. ಒಳ್ಳೆಯದು. ತಿಲಕದ ಸಮಾರಂಭವನ್ನು ನೋಡಿ ರಾಜತಿಲಕದ ಸಮಾರಂಭ ನೆನಪಿಗೆ ಬರುತ್ತದೆ? ಈಗ ಈ ತಿಲಕ ಸಂಪೂರ್ಣ ಸ್ಥಿತಿಯವರೆಗೆ ಇರುವುದು ನಂತರ ರಾಜತಿಲಕ ಸಿಗುವುದು. ಈ ತಿಲಕ ಪ್ರತಿಜ್ಞೆ ಮತ್ತು ಪ್ರತ್ಯಕ್ಷತೆಯ ತಿಲಕವಾಗಿದೆ. ಇಷ್ಟು ಶಕ್ತಿಯಿದೆಯೇ? ಆತ್ಮಿಕ ಸೇವಾಧಾರಿ ಗುಂಪಿಗೆ ಈ ವಿಶೇಷ ಶಿಕ್ಷಣ ಕೊಡುತ್ತಿದ್ದೇವೆ. ತಮ್ಮನ್ನು ಎಷ್ಟು ಅಧಿಕಾರಿ ಎಂದು ತಿಳಿಯುತ್ತೀರೋ ಅಷ್ಟು ಸತ್ಕಾರಿಯಾಗುವಿರಿ. ಮೊದಲು ಸತ್ಕಾರ ಕೊಡುವುದು ನಂತರ ಅಧಿಕಾರ ಪಡೆಯುವುದು, ಸತ್ಕಾರ ಮತ್ತು ಅಧಿಕಾರ ಎರಡೂ ಜೊತೆಗಿರಲಿ. ಸತ್ಕಾರವನ್ನು ಬಿಟ್ಟು ಕೇವಲ ಅಧಿಕಾರ ಪಡೆದರೆ ಏನಾಗುವುದು? ಮಾಡಿದ್ದೆಲ್ಲಾ ವ್ಯರ್ಥವಾಗುವುದು. ಆದ್ದರಿಂದ ಎರಡೂ ಮಾತುಗಳನ್ನು ಜೊತೆಗಿಟ್ಟುಕೊಳ್ಳಿ.

ಅವ್ಯಕ್ತ ಮುರಳಿ 09-12-1970.

***ಪುರುಷಾರ್ಥಕ್ಕೆ ಮುಖ್ಯ ಆಧಾರ ಗ್ರಹಣ ಶಕ್ತಿ***

ಆತ್ಮಿಕ ಸ್ಥಿತಿಯಲ್ಲಿ ಇದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಮಾಸ್ಟರ್ ಸರ್ವ ಶಕ್ತಿವಾನ್ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು 5,000 ವರ್ಷಗಳ ಹಿಂದಿನ ಸಂಸ್ಕಾರಗಳನ್ನು ಗ್ರಹಿಸಿದ್ದೇನೆ.

2. ನಾನು ಶಕ್ತಿಶಾಲಿ ಸ್ಮೃತಿಯಿಂದ ನನ್ನ ವೃತ್ತಿ ಮತ್ತು ದೃಷ್ಟಿಯನ್ನು ಶಕ್ತಿಶಾಲಿಯಾಗಿ ಮಾಡಿಕೊಂಡಿದ್ದೇನೆ.

3. ನಾನು ನಿರಾಕಾರಿ ಮತ್ತು ದಿವ್ಯಗುಣದ ಸಾಕ್ಷಾತ್ಕಾರ ಮೂರ್ತಿ.

4. ನಾನು ಸದಾ ಮನ, ವಚನ, ಕರ್ಮದಿಂದ ಸೇವೆಯನ್ನು ಮಾಡುವ ಸೇವಾದಾರಿ.

5. ನಾನು ಬಾಪ್ ದಾದಾರವರಿಂದ ಪ್ರತಿಜ್ಞೆ ಮತ್ತು ಪ್ರತ್ಯಕ್ಷತೆಯ ತಿಲಕವನ್ನು ಹೆಚ್ಚಿಸಿಕೊಂಡಿದ್ದೇನೆ.

6. ನಾನು ಎಷ್ಟು ಅಧಿಕಾರಿಯೋ ಅಷ್ಟೇ ಸತ್ಕಾರಿ.